**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಸಿಸಿ ನಂಬರ್.1200/2023

| | | | |
|---|---|---|---|
| ಸಾಕ್ಷಿಯ ಹೆಸರು | : ಹರೀಶ್ | ಸಿ.ಡಬ್ಲ್ಯು | 9 |
| ತಂದೆಯ ಹೆಸರು | : ಮಂಜುನಾಥ | ಪಿ.ಡಬ್ಲ್ಯು | 6 |
| ವಯಸ್ಸು | : 22 ವರ್ಷ | | |
| ಉದ್ಯೋಗ | : ಖಾಸಗಿ ಉದ್ಯೋಗ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕಃ16.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

2022 ನೇ ಸಾಲಿನಲ್ಲಿ ಕೋಡಿಕ್ಯಾಂಪಿನಿಂದ ಕಡೂರಿಗೆ ಹೋಗುವ ರಸ್ತೆಯಲ್ಲಿರುವ ಎಂ.ಎಸ್.ಐ.ಎಲ್ ಅಂಗಡಿಯ ಎದುರಿಗೆ ಅಪಘಾತದ ಆದ ಬಗ್ಗೆ ಪೋಲೀಸರು ಬಂದು ಬೆಳಗ್ಗೆ 11 ಗಂಟೆಯ ಹೊತ್ತಿಗೆ ಪಂಚನಾಮೆಯನ್ನು ಮಾಡಿರುತ್ತಾರೆ ಮತ್ತು ನನ್ನ ಸಹಿಯನ್ನು ಕೂಡ ಪಡೆದುಕೊಂಡಿರುತ್ತಾರೆ. ನನ್ನ ಜೊತೆ ಕೋರನಹಳ್ಳಿ ಹರೀಶ್ ಎಂಬುವವರು ಕೂಡ ಸಹಿ ಮಾಡಿರುತ್ತಾರೆ. ಪಂಚನಾಮೆಯ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿನಾಂಕ 29.11.2022 ರಂದು ನಾನು ಹೇಳಿದ ಪಂಚನಾಮೆಯನ್ನು ಪೋಲೀಸರು ಮಾಡಿದ್ದಾರೆ ಎಂದರೆ ಸರಿ. ಪಂಚನಾಮೆ ಬೆಳಗ್ಗೆ 11-12 ಗಂಟೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಎಂ.ಎಸ್.ಐ.ಎಲ್ ನಲ್ಲಿ ಕೆಲಸ ಮಾಡುವುದಿಲ್ಲ, ಅದರ ಪಕ್ಕದಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದೇನೆ. ಎಂ.ಎಸ್.ಐ.ಎಲ್ ಅಂಗಡಿಯು ಮುಖ್ಯ ರಸ್ತೆಯಿಂದ 100 ಮೀ ಒಳಗಡೆ ಇದೆ ಎಂದರೆ ಸರಿ. ಪಂಚನಾಮೆ ಮಾಡಿದ್ದಾರೆ ಎನ್ನುವ ಕಾಲಕ್ಕೆ ಸ್ಥಳದಲ್ಲಿ ವಾಹನಗಳು ಇರಲಿಲ್ಲ. ಆ ಕಾಲಕ್ಕೆ ನಾವು ಸ್ಥಳದಲ್ಲಿ 5 ಜನ ಇದ್ದೆವು. ಅವರ ಹೆಸರು ಹೇಳಲು ಬರುವುದಿಲ್ಲ.

ಪಂಚನಾಮೆಯನ್ನು ನನ್ನ ಎದುರಿನಲ್ಲಿಯೇ ಬರೆದಿದ್ದಾರೆ. ಪಂಚನಾಮೆಯನ್ನು ನಾನು ಓದಲಿಲ್ಲ. ಪೋಲೀಸರು ಬರೆದಿರುವ ವಿಷಯಗಳನ್ನು ನನಗೆ ತಿಳಿಸಿರುತ್ತಾರೆ. ಪಂಚನಾಮೆಯಲ್ಲಿ ಬಸ್ಸಿನ ನಂಬರ್, ಅಪಘಾತದ ವಿವರಗಳನ್ನು ನಮೂದಿಸಿದ್ದಾರೆ. ಸ್ಕೂಟಿ ಚಾಲಕರು ನನ್ನ ಪರಿಚಯದವರು ಇರುವುದಿಲ್ಲ. ನನಗೆ ಅಪಘಾತದ ಬಗ್ಗೆ ಮತ್ತು ಪಂಚನಾಮೆಯನ್ನು ಬಗ್ಗೆ ಯಾವುದೇ ವಿಷಯ ಗೊತ್ತಿರದಿದ್ದರೂ ಕೂಡ ಪೋಲೀಸರು ಹೇಳಿದ ಹಾಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.